ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಕರ್ನಾಟಕ, ಬೆಂಗಳೂರು
Rajiv Gandhi University of Health Sciences, Karnataka, Bangalore
4th T Block, Jayanagar, Bangalore – 560 041

**ಆರ್.ಜಿ.ಯು.ಹೆಚ್.ಎಸ್./ಕನ್ನಡ ಸಂಘ/೦೧/೨೦೨೬ ದಿ. ೧೭-೦೨-೨೬**

# ಅಧಿಸೂಚನೆ

**ಪೀಠಿಕೆ:** ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಕರ್ನಾಟಕ, ಸ್ಥಾಪನೆಯಾದ ನಂತರ ಆಡಳಿತದಲ್ಲಿ ಕನ್ನಡವನ್ನು ಅಳವಡಿಸುವ ಪ್ರಯತ್ನಗಳನ್ನು ನಿರಂತರವಾಗಿ ಮಾಡುತ್ತಾ ಬಂದಿದೆ. ಇದರ ಮುಂದುವರೆದ ಭಾಗವಾಗಿ ವಿಶ್ವವಿದ್ಯಾಲಯದ ಚಟುವಟಿಕೆಗಳನ್ನು ಕೂಡಾ ಸಾಧ್ಯವಾದಷ್ಟು ಕನ್ನಡದಲ್ಲಿ ನಡೆಸುತ್ತಾ ಬಂದಿದೆ. ಈ ಎಲ್ಲಾ ವಿಷಯಗಳಿಗೂ ಸಾಂಘಿಕ ರೂಪ ಕೊಡುವ ಮತ್ತು ವಿಶ್ವವಿದ್ಯಾಲಯದ ಎಲ್ಲಾ ಚಟುವಟಿಕೆಗಳಲ್ಲಿ ಕನ್ನಡ ಭಾಷಾ ಅಳವಡಿಕೆಯನ್ನು ಮತ್ತಷ್ಟು ಚುರುಕುಗೊಳಿಸುವ ಉದ್ದೇಶದಿಂದ ವಿಶ್ವ-ವಿದ್ಯಾಲಯದಲ್ಲಿ ಕನ್ನಡ ಸಂಘವನ್ನು ಈ ಅಧಿಸೂಚನೆಯ ಮೂಲಕ ಪ್ರಾರಂಭಿಸಲಾಗುತ್ತಿದೆ.

## ಕನ್ನಡ ಸಂಘದ ಉದ್ದೇಶ ಮತ್ತು ಕಾರ್ಯಕ್ರಮಗಳು

೦೧. ವಿಶ್ವವಿದ್ಯಾಲಯದ ಆಡಳಿತದಲ್ಲಿ ಕನ್ನಡ ಅಳವಡಿಕೆಯ ಬಗ್ಗೆ ನಿಗವಹಿಸುವುದು ಮತ್ತು ಪ್ರೋತ್ಸಹಿಸುವುದು.

೦೨. ವಿಶ್ವವಿದ್ಯಾಲಯದ ಅಧಿಕಾರಿ ಸಿಬ್ಬಂದಿಗಳಲ್ಲಿ ಕನ್ನಡದಲ್ಲಿ ಬರೆಯುವಂತೆ ಪ್ರೋತ್ಸಾಹಿಸುವುದು.

೦೩. ಆರೋಗ್ಯ ವಿಜ್ಞಾನಗಳ ವಿಷಯಗಳ ಮತ್ತು ಆರೋಗ್ಯ ಸಂಬಂದಿ ಮಾಹಿತಿ ನೀಡುವಂತ ಜಾಗೃತಗೊಳಿಸುವಂತ ಪುಸ್ತಕಗಳನ್ನು ಕನ್ನಡ ಭಾಷೆಯಲ್ಲಿ ಪ್ರಕಟಿಸುವುದು.

೦೪. ಆರೋಗ್ಯಕರ ಜೀವನ ಪದ್ಧತಿಯ ಬಗ್ಗೆ ಸರಳ ಕನ್ನಡ ಭಾಷೆಯಲ್ಲಿ ಪ್ರಕಟಿಸುವುದು.

೦೫. ಆರೋಗ್ಯ ವಿಜ್ಞಾನಗಳ ವೃತ್ತಿಪರರಿಗಾಗಿ ಆರೋಗಯ ವಿಜ್ಞಾನ ಕನ್ನಡ ಭಾಷಾ ಕವಿ ಘೋಷ್ಠಿಗಳನ್ನು ನಡೆಸುವುದು

೦೬. ಕನ್ನಡ ರಾಜ್ಯೋತ್ಸವ, ಅಂಬೇಡ್ಕರ, ಗಾಂಧಿ, ಇತ್ಯಾದಿ ರಾಷ್ಟ್ರೀಯ ನಾಯಕರ ಮತ್ತಿತರ ಕಾರ್ಯಕ್ರಮಗಳನ್ನು ಆಚರಿಸುವುದು.

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಕರ್ನಾಟಕ, ಬೆಂಗಳೂರು
Rajiv Gandhi University of Health Sciences, Karnataka, Bangalore
4th T Block, Jayanagar, Bangalore – 560 041

## ವಿಶ್ವವಿದಾಲಯದ ಕನ್ನಡ ಸಂಘದ ಹೆಸರು:

## “ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯ ಸಂಚಾಲಿತ - ಭುವನೇಶ್ವರಿ ಕನ್ನಡ ಸಂಘ”

**ಕನ್ನಡ ಸಂಘದ ರಚನೆ:** ಕನ್ನಡ ಸಂಘದ ರಚನೆಯನ್ನು ಮಾನ್ಯ ಕುಲಪತಿಗಳ ಆದೇಶದ ಮೇರೆಗೆ ಪ್ರತಿ ಮೂರು ವರ್ಷಗಳಿಗೊಮ್ಮೆ ಹೊರಡಿಸಲಾಗುವುದು.

ಗೌರವಾನಿತ ಕುಲಪತಿಗಳ ಸೂಚನೆಯಂತೆ ೨೦೨೬ ರಿಂದ ಮುಂದಿನ ಮೂರು ವರ್ಷಗಳಿಗೆ ಈ ಕೆಳಗಿನಂತೆ ಭುವನೇಶ್ವರಿ ಕನ್ನಡ ಸಂಘವನ್ನು ಈ ಅಧಿಸೂಚನೆ ಮೂಲಕ ಪ್ರಾಂಭಿಸಲಾಗುತ್ತಿದೆ.

ಭುವನೇಶ್ವರಿ ಕನ್ನಡ ಸಂಘದ ೨೦೨೬ರಿಂದ ೨೦೨೯ ರವರೆಗಿನ ಪದಾಧಿಕಾರಿಗಳು ಈ ಕೆಳಗಿನಂತೆ ಇರವುವರು

| | |
|---|---|
| ಗೌರವಾನ್ವಿತ ಕುಲಪತಿಗಳು | **ಅಧ್ಯಕ್ಷರು** |
| ಮಾನ್ಯ ಕುಲಸಚಿವರು | **ಕಾರ್ಯದರ್ಶಿಗಳು** |
| ಮಾನ್ಯ ಕುಲಸಚಿವರು (ಮೌಲ್ಯಮಾಪನ) | **ಸದಸ್ಯರು** |
| ಡಾ. ಷನ್ಮುಖಪ್ಪ, ನಿರ್ದೇಶಕರು (ಪ್ರಭಾರ) | **ಸದಸ್ಯರು** |
| ಡಾ. ರಾಜಶ್ರೀ, ಉಪ ಕುಲಸಚಿವರು | **ಸದಸ್ಯರು** |
| ಡಾ. ವಸಂತ ಶೆಟ್ಟಿ, ಉಪ ಕುಲಸಚಿವರು | **ಸದಸ್ಯರು** |
| ಡಾ. ಸುಶೀಲ, ವಿಶ್ವವಿದ್ಯಾಲಯದ ಸಾರ್ವಜನಿಕ ಸಂಪರ್ಕಾಧಿಕಾರಿಗಳು | **ಸದಸ್ಯರು** |
| ಡಾ. ಎಸ್. ರಾಮಚಂದ್ರ ಶೆಟ್ಟಿ, ನಿರ್ದೇಶಕರು | **ಸಮನ್ವಯಾಧಿಕಾರಿಗಳು** |

ಈ ಎಲ್ಲಾ ಪದಾಧಿಕಾರಿಗಳು ಮುಂದಿನ ಮೂರು ವರ್ಷಗಳಿಗೆ ಅಥವಾ ಅವರು ವಿಶ್ವವಿದ್ಯಾಲಯದಲ್ಲಿ ಕಾರ್ಯ ನಿರ್ವಹಿಸುವ ಅವಧಿಯವರೆಗಿರುತ್ತಾರೆ.

Digitally signed by
ARJUN SHETTYHALLI ODEYAR
Date: 23-02-2026 16:37:53

**ಕುಲಸಚಿವರು**

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಕರ್ನಾಟಕ, ಬೆಂಗಳೂರು
Rajiv Gandhi University of Health Sciences, Karnataka, Bangalore
4th T Block, Jayanagar, Bangalore – 560 041